ತೆಗೆದುಕೊಂಡಿದ್ದೇವೆ. ಆದರೆ ಅದು ಉತ್ತರದಲ್ಲಿ ಬಂದಿಲ್ಲ. ಉತ್ತರವನ್ನು rectify ಮಾಡಿ ಮಾನ್ಯ ಸದಸ್ಯರಿಗೆ ನಾನು ಕಳುಹಿಸಿಕೊಡುತ್ತೇನೆ.

ಲಾಲಾಜಿ ಮೆಂಡನ್, ಸಿದ್ದು ಸಾವದಿ ಗೈರು ಹಾಜರಿ

ಸಭೆಗಳಿಗೆ ಹಾಜರಿ

(1381) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಹಾಸನ ಜಿಲ್ಲೆಯಲ್ಲಿ ಕರ್ನಾಟಕ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಕುರಿತು ನಡೆಸುವ ಸಭೆಗಳು ವರ್ಷಕ್ಕೆ ಎಷ್ಟು ಬಾರಿ ನಡೆಯುತ್ತವೆ;

ಆ) ಈ ಸಭೆಗಳಿಗೆ ಅಪೇಕ್ಷಿತರಿರುವ ಇಲಾಖೆ ಹಾಗೂ ಅಧಿಕಾರಿಗಳು ಯಾರ್ಯಾರು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಈ ಸಭೆಯಲ್ಲಿ ಹಾಜರಿರುವಂತೆ ಸೂಚನೆ ನೀಡಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಜಿಲ್ಲಾ ಪಟ್ಟದ ಸಭೆಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಾಗುತ್ತಿರುವುದು ನಿಜವೇ;

ಈ) ನಿಜವಾಗಿದ್ದಲ್ಲಿ, ಅರಸೀಕೆರೆ ತಾಲ್ಲೂಕು ಒಳಗೊಂಡಂತೆ ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ವಾರದಲ್ಲಿ 3–4 ಬಾರಿ ಸಭೆಗೆಂದು ಹೋಗುತ್ತಿರುವುದರ ಔಚಿತ್ಯವೇನು.

ಉ) ಇದರಿಂದಾಗಿ ಕಛೇರಿಗಳಲ್ಲಿ ಅಧಿಕಾರಿಗಳಿಲ್ಲದೆ ಸಾರ್ವಜನಿಕರ ಹಾಗೂ ಅಭಿವೃದ್ಧಿ ಕೆಲಸ ಕಾರ್ಯಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಸಭೆಗಳನ್ನು ನಡೆಸಲು ಇರುವ ಮಾರ್ಗ ಸೂಚಿ–ಮಾನದಂಡಗಳೇನು. ಇವುಗಳನ್ನು ಪಾಲಿಸದಿರಲು ಕಾರಣಗಳೇನು;

ಊ) ಜಿಲ್ಲಾ ಮಟ್ಟದ ಸಭೆಗಳಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳ ಅಗತ್ಯವಿದೆಯೇ, (ವಿವರ ಒದಗಿಸುವುದು).

ಶ್ರೀ ರಾಮಚಂದ್ರ ಗೌಡ (ಯೋಜನಾ ಸಚಿವರು)

ಅ) ಕರ್ನಾಟಕ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಕುರಿತು ತಿಂಗಳಿಗೆ ನಡೆಯುತ್ತವೆ.

ಆ) ಮತ್ತು ಇ) ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಯ ಅಧಿಕಾರಿಗಳು ಕೆಡಿಪಿ ಸಭೆಗೆ ಹಾಜರಾಗಬೇಕಾಗುತ್ತದೆ. ತಾಲ್ಲೂಕು ಮಟ್ಟದ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಪರಿಶೀಲಿಸಲು ಸಭೆಗೆ ಆಹ್ವಾನಿಸಲಾಗುವುದು.

ಈ) ಹಾಸನ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಎಲ್ಲ ತಾಲ್ಲೂಕು ಮಟ್ಟದ ಅಧಿಕಾರಿಗಳು ವಾರದಲ್ಲಿ 3–4 ಬಾರಿ ಸಭೆಗೆ ಹಾಜರಾಗುತ್ತಿಲ್ಲವೆಂದು ತಿಳಿಸಿರುತ್ತಾರೆ.

ಉ) ಉದ್ಭವಿಸುವುದಿಲ್ಲ.

ಊ) ಅಗತ್ಯವಿದೆ. ತಾಲ್ಲೂಕು ಮಟ್ಟದ ಕಾರ್ಯಕ್ರಮಗಳ ಅನುಷ್ಠಾನಾಧಿಕಾರಿಗಳಾದ ಕಾರ್ಯ ನಿರ್ವಾಹಕ ಅಧಿಕಾರಿಗಳನ್ನು ಎಸ್.ಜಿ.ಎಸ್.ವೈ, ಎಂ.ಎಂ.ಆರ್.ಕೆ.ಡಿ.ಪಿ. ಆಶ್ರಯ, ಸುವರ್ಣ ಗ್ರಾಮೋದಯ ಯೋಜನೆಗಳಂತಹ ಯೋಜನೆಗಳ ಪ್ರಗತಿ ಪರಿಶೀಲಿಸಲು ಆಹ್ವಾನಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರ ಉತ್ತರ ಸಿಕ್ಕಿದೆ. ನಮ್ಮ ಜಿಲ್ಲೆಯಲ್ಲಿ ವಾರದಲ್ಲಿ 3–4 ಬಾರಿ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆಯನ್ನು ಕರೆಯುತ್ತಾರೆ. ತಾಲ್ಲೂಕಿನಿಂದ ಅನೇಕ ಅಧಿಕಾರಿಗಳು ಈ ಸಭೆಗಳಿಗೆಂದು ಹೋಗುತ್ತಿರುತ್ತಾರೆ. ಈ ಬಗ್ಗೆ ಪ್ರಶ್ನೆ ಕೇಳಿದರೆ, ವರ್ಷಕ್ಕೆ 12 ಬಾರಿ ಮಾತ್ರ ಸಭೆ ಕರೆಯುತ್ತೇವೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಬಹುಶಃ ಸರಿಯಾದ ಮಹಿತಿ ಮಾನ್ಯ ಸಚಿವರಿಗೆ ತಿಳಿದಿಲ್ಲವೆಂದು ಕಾಣುತ್ತದೆ. ನಾವು ತಹಶೀಲ್ದಾರ್‌ರವರನ್ನು ಕೇಳಿದರೆ ಅವರು ಇರುವುದಿಲ್ಲ. EO ರವರನ್ನು ಕೇಳಿದರೆ ಅವರು ಇರುವುದಿಲ್ಲ, BEO ಕೇಳಿದರೆ ಅವರೂ ಇರುವುದಿಲ್ಲ, ಜಿಲ್ಲಾ ಪಂಚಾಯತ್‌ನಲ್ಲಿ AEEರವರನ್ನು ಕೇಳಿದರೆ ಅವರೂ ಇರುವುದಿಲ್ಲ, KEB AEE ಕೇಳಿದರೂ ಕೂಡ ಇರುವುದಿಲ್ಲ. ಎಲ್ಲರೂ ಕೂಡ ಮೀಟಿಂಗ್‌ಗೆ ಹೋಗಿದ್ದಾರೆಂದು ಹೇಳಲಾಗುತ್ತದೆ. ಈ ಮೀಟಿಂಗ್‌ಗಳ ಉದ್ದೇಶವೇನು ಎಂದು ನನಗೆ ಗೊತ್ತಿಲ್ಲ.ನೈತ ಬಾಂಧವರು, ಕಾರ್ಮಿಕರು ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳನ್ನು ಭೇಟಿ ಮಾಡಬೇಕಾದರೆ ಯಾರೂ ಇರುವುದಿಲ್ಲ. ನೀರಿನ ಸಮಸ್ಯೆ ಇರಬಹುದು, ರಸ್ತೆಯ ಸಮಸ್ಯೆ ಇರಬಹುದು ಮತ್ತಿತರ ಅನೇಕ ಸಮಸ್ಯೆಗಳ ಬಗ್ಗೆ ಅಧಿಕಾರಿಗಳನ್ನು ಕೇಳಬೇಕಾದರೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಯಾರೂ ಸಹ ಇರುವುದಿಲ್ಲ. ಈ ಅಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಪ್ರತಿ ಸಲವೂ ಸಭೆಗಳಿಗೆ ಹೋಗುತ್ತೇವೆಂದು ಹೇಳುತ್ತಿದ್ದಾರೆ. ಈ ಬಾರಿಯ ಅಧಿವೇಶನ 3ನೇ ತಾರೀಖು ಪ್ರಾರಂಭವಾಯಿತು. 7ನೇ ತಾರೀಖು, ಶನಿವಾರ ನಾನು ಅರಸೀಕೆರೆ ಹೋದೆ. ನನ್ನ ಕ್ಷೇತ್ರದ ಕುಂದು ಕೊರತೆಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಬೇಕೆಂದರೆ, ಅವರುಗಳ ಮೀಟಿಂಗ್‌ನಲ್ಲಿದ್ದಾರೆಂದು ಉತ್ತರ ಬಂತು. 14ನೇ ತಾರೀಖಿನಂದು ನಾನು ಕ್ಷೇತ್ರಕ್ಕೆ ಹೋದೆ. ಆದರೆ ಅಂದು ಎರಡನೇ ಶನಿವಾರವಾದ್ದರಿಂದ ಸರ್ಕಾರಿ ರಜೆ ಇತ್ತು. ಮೊನ್ನೆ 21 ನೇ ತಾರೀಖು, ಶನಿವಾರವೂ ಸಹ ನಾನು ಕ್ಷೇತ್ರಕ್ಕೆ ಹೋದಾಗ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆ ಕರೆದಿದ್ದಾರೆ, ಅಲ್ಲಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಹೋಗಿದ್ದಾರೆಂದು ತಿಳಿದು ಬಂತು. ಸರ್ಕಾರದ ಹಣ ಸದುಪಯೋಗವಾಗದೇ ಇಲ್ಲಿಯವರೆಗೂ ನೆನಗುದಿಗೆ ಬಿದ್ದು ವಾಪಸ್ ಹೋಗತಕ್ಕಂಥದ್ದು, ಕೆಲಸ ಕಾರ್ಯಗಳು ಆಗದೇ ಇರತಕ್ಕಂಥದ್ದು, ಇಲ್ಲಿ ನಡೆಯುತ್ತಿದೆ. ಇದರ ಬಗ್ಗೆ

ವಿಚಾರಿಸಲು ಯಾರೂ ಅಧಿಕಾರಿಗಳು ಸಿಗುವುದಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಸಮಂಜಸವಾದ ಉತ್ತರ ನೀಡಬೇಕೆಂದು ಕೋರುತ್ತೇನೆ.

ಶ್ರೀ ರಾಮಚಂದ್ರಗೌಡ : ಮಾನ್ಯ ಉಪಾಧ್ಯಕ್ಷರೆ, ಜಿಲ್ಲಾ ಮಟ್ಟದ ಸಭೆ ಆಗಬಹುದು, ತಾಲ್ಲೂಕು ಮಟ್ಟದ ಸಭೆ ಆಗಬಹುದು, ತಿಂಗಳಿಗೆ ಒಂದರಂತೆ ವರ್ಷಕ್ಕೆ 12 ಸಭೆ ನಡೆಯುತ್ತವೆ ಎನ್ನುವಂತಹ ಉತ್ತರವನ್ನು ನಾನು ಈಗಾಗಲೇ ಕೊಟ್ಟಿದ್ದೇನೆ. ನಮ್ಮ ನಿಯಮದಲ್ಲೂ ಕೂಡ ಅದೇ ತರಹ ಇದೆ.

ಕಂಡಿಕೆ 3[e] ರಲ್ಲಿ ಸೂಚಿಸಿರುವ ತಾಲ್ಲೂಕು ಮಟ್ಟದ ಮಾಸಿಕ ಪರಿಶೀಲನಾ ಸಮಿತಿಯು ಪ್ರತಿ ತಿಂಗಳು 5ನೇ ತಾರೀಖು ಸಭೆ ಸೇರತಕ್ಕದ್ದು. ಒಂದು ವೇಳೆ 5ನೇ ತಾರೀಖು ರಜಾ ದಿನವಾಗಿದ್ದರೆ, ಮುಂದಿನ ಕೆಲಸದ ದಿನದಂದು ಸಭೆ ಸೇರತಕ್ಕದ್ದು.

ಅದೇ ರೀತಿಯಾಗಿ

ಕಂಡಿಕೆ 3[ಅ] ನಲ್ಲಿ ಸೂಚಿಸಿರುವ ಜಿಲ್ಲಾ ಮಟ್ಟದ ಮಾಸಿಕ ಪರಿಶೀಲನಾ ಸಮಿತಿಯು ಪ್ರತಿ ತಿಂಗಳು 11ನೇ ತಾರೀಖು ಸಭೆ ಸೇರತಕ್ಕದ್ದು. ಒಂದು ವೇಳೆ 11 ನೇ ತಾರೀಖು ರಜಾ ದಿನವಾಗಿದ್ದಲ್ಲಿ ಮುಂದಿನ ಕೆಲಸದ ದಿನದಂದು ಸಭೆ ಸೇರತಕ್ಕದ್ದು. ಈ ರೀತಿಯಾಗಿ ನಾವು ಕಳುಹಿಸಿದ್ದೇವೆ. ಅಕಸ್ಮಾತ್ ಯಾರಾದರೂ ಜಿಲ್ಲಾ ಮಂತ್ರಿಗಳೋ ಅಥವಾ ಮಾನ್ಯ ಮುಖ್ಯಮಂತ್ರಿಗಳೋ, ಯಾರಾದರೂ ಜಿಲ್ಲೆಗೆ ಬಂದಿದ್ದರೆ, ಅಂತಹ ಸಂದರ್ಭದಲ್ಲಿ ತಾಲ್ಲೂಕಿನ ಅಧಿಕಾರಿಗಳು ಹೋಗಿರಲಿಕ್ಕೂ ಉಂಟು. ಜಿಲ್ಲಾಧಿಕಾರಿಗಳಿಗೆ ಕೂಡಲೇ ನಾನು ಹೇಳುತ್ತೇನೆ. ಆ ತಾಲ್ಲೂಕಿನ ಅಧಿಕಾರಿಗಳು ಯಾವುದೇ ಸಂದರ್ಭದಲ್ಲಿ ಅವರ ಕಛೇರಿಗಳಲ್ಲಿ ಸಿಗಬೇಕು. ಹೀಗೆ ಸಬೂಬು ಹೇಳಿ, ವಾರದಲ್ಲಿ 3–4 ಸಭೆಗಳಿಗೆ ಹೋಗುತ್ತೇವೆಂದು ಹೇಳಿದರೆ ತಪ್ಪಾಗುತ್ತದೆ. ಅಂತಹವರು ಯಾರಾದರೂ ಇದ್ದರೆ, ಕೂಡಲೇ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಇಂಥಿಂಥ ದಿವಸ ಇಂಥಿಂಥವರು ಇರಲಿಲ್ಲವೆಂದು ಬರವಣಿಗೆಯಲ್ಲಿ ಕೊಟ್ಟರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೂ ನಾವು ತಯಾರಿದ್ದೇವೆ. ಯಾವುದೇ ಸಂದರ್ಭದಲ್ಲಿ ಹೀಗೆ ಆಗುವುದಕ್ಕೆ ಬಿಡುವುದಿಲ್ಲ ಎನ್ನುವಂತಹ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡಬಯಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಜಾಸ್ತಿಯಾಗಿ ಬಿಟ್ಟಿದೆ. ತಾಲ್ಲೂಕು ಮಟ್ಟದ ಅಧಿಕಾರಿಗಳು ಇರುವುದೇ ಇಲ್ಲ. Executive Engineer ಕರೆದಿದ್ದರು, CS ಕರೆದಿದ್ದರು, DC ಕರೆದಿದ್ದರು, ಅವರು ಕರೆದಿದ್ದರು, ಇವರು ಕರೆದಿದ್ದರು ಎಂದು ವಾರದಲ್ಲಿ 3–4 ಸಲ ಮೀಟಿಂಗ್‌ಗೆಂದು ಹೋಗಿರುತ್ತಾರೆಂದು ಹೇಳುತ್ತಾರೆ. ಜಿಲ್ಲಾ ಕೇಂದ್ರಗಳಿಂದ ತಾಲ್ಲೂಕುಗಳಿಗೆ ಓಡಾಡುತ್ತಾರೆ. ನಾವು ಯಾವತ್ತಾದರೂ ಕೇಳಿದರೆ, ಆ ಮೀಟಿಂಗ್ ಇತ್ತು, ಈ ಮೀಟಿಂಗ್ ಇತ್ತು ಎಂದು ಅಧಿಕಾರಿಗಳು ಸಿಗುವುದೇ

ದುರ್ಲಭವಾಗಿದೆ. ಇದಕ್ಕೆ ಏನಾದರೂ ಬಿಗಿ ಮಾಡಬೇಕು. DCಗಳಿಗೆ ಮತ್ತು CEOಗಳಿಗೆ ಈ ಬಗ್ಗೆ ಆದೇಶ ಕೊಡಿ. ತಿಂಗಳಿನಲ್ಲಿ 4–5 ಮೀಟಿಂಗ್‌ಗಳನ್ನು ಅವರು ಮಾಡಬಾರದು. ಅದರಲ್ಲೂ ಸೋಮವಾರದಂದು ಕಡ್ಡಾಯವಾಗಿ ಮೀಟಿಂಗ್‌ಗಳನ್ನು ಮಾಡದಂತೆ ಮಾಡಬೇಕು. ಏಕೆಂದರೆ, ಸೋಮವಾರ ಸಾಮಾನ್ಯವಾಗಿ ಎಲ್ಲಾ mofussil townಗಳಲ್ಲೂ shandy ಇರುತ್ತದೆ. ಅವತ್ತು ಎಲ್ಲಾ ಅಧಿಕಾರಿಗಳೂ ಸಿಗುವಂತೆ ನೀವು ಮಾಡಬೇಕು.

ಉಪಾಧ್ಯಕ್ಷರು : ಪ್ರಶ್ನೋತ್ತರ 11.30 ಗಂಟೆಗೆ ಪ್ರಾರಂಭವಾಯಿತು. ಈಗ 12.30 ಗಂಟೆಯಾಗುತ್ತಿದೆ. ಒಂದು ಗಂಟೆಯೊಳಗಾಗಿ ಪ್ರಶ್ನೋತ್ತರ ಮುಗಿಸಬೇಕಾಗಿದೆ. ಇನ್ನೂ ಚರ್ಚಿಸಬೇಕಾದ ಹಲವಾರು ವಿಷಯಗಳಿವೆ. ಮಾನ್ಯ ಜ್ಞಾನೇಂದ್ರವರೆ, ತಾವು ಪ್ರತಿಯೊಂದು ಪ್ರಶ್ನೆಗೂ ಎದ್ದು ನಿಂತುಕೊಂಡು ಉಪ ಪ್ರಶ್ನೆ ಕೇಳಿದರೆ ಹೇಗೆ ?

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಅಧಿಕಾರಿಗಳು ಮೀಟಿಂಗ್ ಕಡಿಮೆ ಮಾಡಿ, ಅವರು Head Quartersನಲ್ಲೇ ಇದ್ದು, spot inspection ಮಾಡುವಂತೆ ಮಾಡಬೇಕು. ಜಿಲ್ಲಾ ಪಂಚಾಯತ್‌ನ ಸ್ಥಾಯಿ ಸಮಿತಿ ಸಭೆಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಹೋಗಬೇಕೆಂದರೆ ಹೇಗೆ ? ಜಿಲ್ಲಾ ಮಟ್ಟದ ಅಧಿಕಾರಿಗಳು ಮಾತ್ರ ಆ ಸಭೆಗೆ ಹೋದರೆ ಸಾಕಾಗುತ್ತದೆ. ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಸೂಚನೆ ಕೊಡದೇ ಹೋದರೆ, ತಿಂಗಳಿಗೆ 20 ದಿನ ಮೀಟಿಂಗ್‌ಗಳೇ ನಡೆಯುತ್ತಿರುತ್ತವೆ. ಅಧಿಕಾರಿಗಳು ಯಾರೂ ಕೂಡ ಸಿಗುವುದೇ ಇಲ್ಲ.

ಶ್ರೀ ಬಿ.ಶಿವರಾಂ : ಮಾನ್ಯ ಉಪಾಧ್ಯಕ್ಷರೆ, ಅರಸೀಕೆರೆ ತಾಲ್ಲೂಕಿಗೆ ಸಂಬಂಧಪಟ್ಟಂತೆ ಅಲ್ಲಿಯ ಶಾಸಕರು ಈ ಪ್ರಶ್ನೆಯನ್ನು ಕೇಳಿದ್ದಾರೆ. ಇದು ವಾಸ್ತವಿಕ ಸಂಗತಿ. ಅವರು ಏನು ಕೇಳಿದ್ದಾರೆ, ಅದು ಇವತ್ತು ಹಾಸನ ಜಿಲ್ಲೆಯಲ್ಲಿ ನಡೆಯುತ್ತಿರತಕ್ಕಂಥ ಸಂಗತಿಯಾಗಿದೆ. ನಿಮ್ಮ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು ವಾರದಲ್ಲಿ 3–4 ಸಲ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ನೀವೇನಾದರೂ ಹಾಸನದಲ್ಲಿ ಒಂದು ವಾರದಲ್ಲಿ ನಾಲ್ಕು ದಿವಸ ಓಡಾಡಿ. ಆ ನಾಲ್ಕೂ ದಿವಸವೂ ಸರ್ಕಾರದ ಎಲ್ಲಾ ಕಾರುಗಳು ಮತ್ತಿತರ ವೆಹಿಕಲ್‌ಗಳು ಡಿ.ಸಿ. ಆಫೀಸ್ ಮುಂದೆಯೇ ನಿಂತಿರುವುದನ್ನು ನೀವು ಕಾಣುತ್ತೀರಿ. ಅಧಿಕಾರಿಗಳಿಗೆ ಏನು ಕೆಲಸವಿರುತ್ತದೆ ? ತಾವು ಮಂತ್ರಿಗಳು, ಮುಖ್ಯಮಂತ್ರಿಗಳು ಜಿಲ್ಲೆಗೆ ಭೇಟಿ ನೀಡುತ್ತಾರೆಂದು ಹೇಳಿದಿರಿ, ವಾರದಲ್ಲಿ ಮಂತ್ರಿಗಳು 4–5 ದಿವಸ ಅಲ್ಲೇ ಇದ್ದರೆ, ಎಲ್ಲಾ ಅಧಿಕಾರಿಗಳು ಅಲ್ಲೇ ಇರಬೇಕೆನ್ನುವುದಾದರೆ, ಶಾಸಕರು ಏನು ಕೆಲಸ ಮಾಡುವುದಕ್ಕೆ ಸಾಧ್ಯ ? ಎರಡನೆಯದಾಗಿ, ಜನಸಾಮಾನ್ಯರು ಯಾರನ್ನು ಹೋಗಿ ಭೇಟಿಯಾಗಬೇಕು,

ಅವರು ಯಾವ ಅಧಿಕಾರಿಗಳನ್ನು ಭೇಟಿ ಮಾಡುವುದಕ್ಕೆ ಸಾಧ್ಯವಿಲ್ಲ. ದಿವಸ ಬಂದು ಜಿಲ್ಲಾ ಕಚೇರಿಯಲ್ಲಿ ನಿಂತುಕೊಳ್ಳುವುದಕ್ಕಾಗುತ್ತದೆಯೇ ? ಹಾಸನ ಜಿಲ್ಲೆಗೆ ಅವರು ಕೇಳಿರುವ ಪ್ರಶ್ನೆ ಪ್ರಸ್ತುತವಾಗಿದೆ. ಜಿಲ್ಲಾ ಮಟ್ಟದ ಅಧಿಕಾರಿಗಳಾದ ಜಿಲ್ಲಾಧಿಕಾರಿಗಳನ್ನು ಕರೆದು ಮಾತನಾಡುವುದು ಸರಿಯೇ ಹೊರತು ಎಲ್ಲಾ ತಾಲ್ಲೂಕಿನ ಅಧಿಕಾರಿಗಳನ್ನು ಕರೆಯುವುದು ಸರಿಯಲ್ಲ. ಎಲ್ಲಾ ತಾಲ್ಲೂಕಿನ ಅಧಿಕಾರಿಗಳನ್ನು ಕರೆದು ದಿವಸ ನೂರು ನೂರು ವಾಹನಗಳನ್ನು ನಿಲ್ಲಿಸಿಕೊಂಡು ನಿಂತಿರುತ್ತಾರೆ. ಮೊನ್ನೆ ಹೊಳೇನರಸೀಪುರಕ್ಕೆ ಹೋಗುತ್ತಿರುವಾಗ 10.00 ಗಂಟೆಗೆ ಮನೆಯ ಹತ್ತಿರ 70 ವಾಹನಗಳನ್ನು ತಾಲ್ಲೂಕಿನಲ್ಲಿ ನಿಂತಿದ್ದಾವೆ. ಆಶ್ಚರ್ಯ, 60–70 ಸರ್ಕಾರಿ ವಾಹನಗಳು ದಿವಸ ಈ ರೀತಿ ನಿಂತಿದ್ದರೆ, ಆ ಅಧಿಕಾರಿಗಳಿಗೆ ಸಂಬಳ, ಪೆಟ್ರೋಲ್‌ಗಳಿಗೆ ಖರ್ಚಾಗುವುದಕ್ಕೆ ಬೆಲೆ ಇಲ್ಲವೆ ? ಎಲ್ಲದಕ್ಕೂ ಕೂಡ ಒಂದು ಇತಿಮಿತಿ ಇರುತ್ತದೆ. ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕರೆಯದೇ ಜಿಲ್ಲೆಯ ಎಲ್ಲಾ ಅಧಿಕಾರಿಗಳ ಸಮೂಹವನ್ನೇ ಕೂರಿಸಿಕೊಂಡು ದಿವಸಗಟ್ಟಲೆ ಕಾಲ ಕಳೆದರೆ, ಜನರ ಸಾಮಾನ್ಯ ಪ್ರಶ್ನೆ ಏನು ? ಅದಕ್ಕೆ ತಾವು ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಆರ್.ರಾಮಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರ ಅಭಿಪ್ರಾಯ ಗೊತ್ತಾಗಿದೆ. ಆ ಬಗ್ಗೆ ಸರಿಯಾದ instruction ಅನ್ನು ಕೂಡಲೆ ಕೊಡಲಾಗುವುದು.

ಶ್ರೀ ಎ.ಎಸ್, ಬಸವರಾಜು : ಉಪಾಧ್ಯಕ್ಷರೆ, ಜಿಲ್ಲಾ ಮಟ್ಟದ ಸಭೆಗಳಲ್ಲಿ ತಾಲ್ಲೂಕು ಮಟ್ಟದ ಸುಮಾರು 120 ಅಧಿಕಾರಿಗಳು ಇರುತ್ತಾರೆ. ಆದರೆ, ಕೇಳುವುದು ಎಷ್ಟು ಜನರಿಗೆಂದರೆ, ಜಿಲ್ಲೆಯ 10 ಅಧಿಕಾರಿಗಳಿಗೆ ಮಾತ್ರ ಕೇಳಲಾಗುವುದು, ಇನ್ನು 110 ಅಧಿಕಾರಿಗಳು ಕೂಡ ಬೆಳಿಗ್ಗೆಯಿಂದ ಸಂಜೆವರೆಗೆ ಇರುತ್ತಾರೆ, ಮತ್ತೆ ವಾಪಸ್ ಬರುತ್ತಾರೆ, ಅವರಿಗೆ TA,DA, ಪೆಟ್ರೋಲ್,ಡಿಸೇಲ್ ಇದಕ್ಕೆ ಸರ್ಕಾರದ ಹಣ ವೆಚ್ಚವಾಗುತ್ತಿದೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಿ. ಶಿವರಾಂ : ಮಂತ್ರಿಗಳ ಉತ್ತರ ಕರೆಕ್ಟ್ ಆಗಿ ಗೊತ್ತಾಯಿತು, ಹಾಸನ ಜಿಲ್ಲೆಯಲ್ಲಿ ಏನು ನಡೆಯುವುದಿಲ್ಲ, ಹೇಳುತ್ತೇವೆಂದು ಅಷ್ಟನ್ನೇ ಹೇಳುತ್ತಿದ್ದಾರೆಯೇ ಹೊರತು, ನಡೆಯುತ್ತಿರುವುದನ್ನು ನಿಯಂತ್ರಣ ಮಾಡುವುದಕ್ಕೆ ಈ ಸರ್ಕಾರದ ಕೈಯಿಂದ ಸಾಧ್ಯವಿಲ್ಲವೆಂಬುದನ್ನು ಸದನ ಅರ್ಥ ಮಾಡಿಕೊಂಡರೆ ಸಾಕು.

ಶ್ರೀ ರಾಮಚಂದ್ರೇಗೌಡ : ತಾವು ಕೂಡ ಮಂತ್ರಿಗಳಾಗಿದ್ದವರು, ನಿಮಗೆ ಗೊತ್ತಿದೆ, ಜಿಲ್ಲಾ ಮಂತ್ರಿಗಳು ಹೋದಾಗ ಜಿಲ್ಲಾ ಅಧಿಕಾರಿಗಳಿರುತ್ತಾರೆ, ಅಕಸ್ಮಾತ್ ತಾಲ್ಲೂಕಿನಲ್ಲಿ ತಹಶೀಲ್ದಾರ್ ಹೋಗುತ್ತಾರೆ, ಮತ್ತೆ ಯಾರು ಹೋಗಬಾರದು. ಇವತ್ತು ನಾನು ಉತ್ತರ ಕೊಟ್ಟಿರುವ ಪ್ರಕಾರ 3–4 ಸಾರಿ ಸಭೆಗಳಾಗಿಲ್ಲ, ತಿಂಗಳಿಗೆ

ಒಂದೊಂದೇ ಸಭೆಗಳಾಗಿರುವುದು. ಅಕಸ್ಮಾತ್ ಅವರು ಅನಾವಶ್ಯಕವಾಗಿ ಹೋಗಿದ್ದರೆ they should be treated as absent hereafterwards.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರೆ, ಹಾಸನ ಜಿಲ್ಲೆ ಒಂದೇ ಅಲ್ಲ, ಇಡೀ ಕರ್ನಾಟಕದ ಎಲ್ಲಾ ತಾಲ್ಲೂಕುಗಳಲ್ಲಿ, ಹಾಗೂ ಜಿಲ್ಲೆಗಳಲ್ಲಿ, ಕಡ್ಡಾಯವಾಗಿ ಈ ಅಭಿವೃದ್ಧಿ ಸಮಿತಿಗಳು ತಾಲ್ಲೂಕು ಮಟ್ಟದಲ್ಲಿರಬಹುದು, ಜಿಲ್ಲಾ ಮಟ್ಟದಲ್ಲಿರಬಹುದು, ಕಡ್ಡಾಯವಾಗಿ ಈ ಸಭೆಗಳಿಗೆ ಹೋಗಲೇಬೇಕೆಂದು ತಾವು ಒಂದು ಆದೇಶವನ್ನು ಕಳುಹಿಸಲೇಬೇಕಾಗುತ್ತದೆ, ಅದನ್ನು ತಾವು ಕಳುಹಿಸುತ್ತಾರಾ ಎಂಬುದರ ಬಗ್ಗೆ ಹೇಳಿ. ಅಲ್ಲಿ 50% ಜನ ಬರದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ ಅಭಿವೃದ್ಧಿ ಸಭೆಗಳನ್ನು ಕರೆಯುವುದರಲ್ಲಿ ಅರ್ಥನೇ ಇಲ್ಲ, ಅದು ಅರ್ಥ ಕಳೆಕೊಂಡಿದೆ. ಅಧಿಕಾರಿಗಳಿರುವುದಿಲ್ಲವೆಂದರೆ ಏನು ಪರಿಸ್ಥಿತಿ, ಅದಕ್ಕೆ ಸ್ಪಷ್ಟವಾಗಿ ಇವತ್ತೇ ಅವರಿಗೆಲ್ಲಾ ಆದೇಶವನ್ನು ಕಳುಹಿಸುತ್ತೇನೆಂದು ತಾವು ಹೇಳಿ.

ಶ್ರೀ ರಾಮಚಂದ್ರೇಗೌಡ : ಪ್ರಜಾಪ್ರಭುತ್ವದಲ್ಲಿ ಸಭೆ ಕರೆಯಬೇಕಾದ್ದು ಧರ್ಮ, ಆ ಸಭೆಗೆ ಅವರು ಬರಬೇಕಾದ್ದು ಕೂಡ ಧರ್ಮ, ಆದರೆ ಒತ್ತಿಕೊಂಡು ಬರುವುದಕ್ಕಾಗುದಿಲ್ಲವಲ್ಲ. ಇವತ್ತು ವಿಧಾನಸಭೆ ಅಥವಾ ವಿಧಾನ ಪರಿಷತ್ ಆಗಬಹುದು ನಮ್ಮ ಹಾಜರಾತಿ ಎಷ್ಟಿರುತ್ತದೆಂದು ನಾವು ಒಂದೊಂದು ಸಲ ನೋಡಿಕೊಳ್ಳಬೇಕಾಗುತ್ತದಲ್ಲ. ಆದುದರಿಂದ, ನಾವು ಯಾರ ಮೇಲೂ ಆ ರೀತಿ ಒತ್ತಡ ತರುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಅವರು ಅನಾವಶ್ಯಕವಾಗಿ ಕಚೇರಿಗಳಲ್ಲಿ ಸಿಗದಿದ್ದರೆ, ಅವರ ಮೇಲೆ ಕಾನೂನಿನ ಕ್ರಮ ತೆಗೆದುಕೊಳ್ಳುವುದನ್ನು ಜಾರಿ ಮಾಡುತ್ತೇವೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಹಾಗಲ್ಲ, ಸಚಿವರು ಜಿಲ್ಲೆಗೆ ಹೋದಾಗ ಕೆಡಿಪಿ ರಿವ್ಯು ಮಿಟಿಂಗ್ ಅಲ್ಲದೇ ಬೇರೆ ದಿವಸಗಳಲ್ಲಿ ಸಚಿವರು ಯಾವ ಇಲಾಖೆಯ ಅಧಿಕಾರಿಯನ್ನು ಕರೆಯುತ್ತಾರೋ ಅವರು ಬಿಟ್ಟು ಬೇರೆಯವರು ಅಲ್ಲಿ ಹೋಗಿ ಕಾಯ್ದುಕೊಂಡಿರಬಾರದು. ಎಲ್ಲರೂ ಇದ್ದರೆ, ಸಚಿವರು ಎಲ್ಲರನ್ನು ಮಾತನಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಎಷ್ಟು ಸಮಯ ವೇಸ್ಟ್ ಆಗುತ್ತದೆ, ಆದುದರಿಂದ ಅವರಿಗೆ ಯಾವ ಅಧಿಕಾರಿ ಬೇಕೋ ಅವರನ್ನು ಮಾತ್ರ ಕರೆಹಿಸಿಕೊಳ್ಳಬೇಕು, ಎಲ್ಲರು ಬಂದು ನಿಲ್ಲುವುದನ್ನು ತಪ್ಪಿಸಬೇಕು.

ಶ್ರೀ ರಾಮಚಂದ್ರೇಗೌಡ : ಸಾಮಾನ್ಯವಾಗಿ ಅತಿವೃಷ್ಟಿಯಾದಂಥ ಸಂದರ್ಭದಲ್ಲಿ ಜಿಲ್ಲಾ ಮಂತ್ರಿಗಳು ಹೋದಾಗ ಅನೇಕ ಅಧಿಕಾರಿಗಳು ಜೊತೆಯಲ್ಲಿರಬೇಕಾಗುತ್ತದೆ.

ಶ್ರೀ ಕೆ.ಜಯಪ್ರಕಾಶ ಹೆಗ್ಡೆ : ಕಂದಾಯ ಹಾಗೂ ಇಂಜಿನಿಯರ್ ಇಲಾಖೆಯ ಅಧಿಕಾರಿಗಳಿದ್ದರೆ ಸಾಕೆನಿಸುತ್ತದೆ.